Reg. R G No. 155 20 - 10 - 1966

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಜೀವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

SATYAVADI, Daily MYSORE 4

ಸತ್ಯವಾದಿ

52 nd Year of Publication

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಸೋವಿಯಟ್ ರಷ್ಯಕ್ಕೆ ಭಾರತದ ರಕ್ಷಣಾ ನಿಯೋಗ

ರಷ್ಯದ ರಕ್ಷಣಾ ಮಂತ್ರಿಯ ಆಹ್ವಾನವನ್ನು ಮನ್ನಿಸಿ, ಈ ತಿಂಗಳು 24 ನೇ ತಾರೀಖು ಭಾರತ ರಕ್ಷಣಾ ಮಂತ್ರಿ ಶ್ರೀ ಸ್ವರ್ಣ ಸಿಂಗ್‌ರವರ ನೇತೃತ್ವದಲ್ಲಿ ಉನ್ನತಮಟ್ಟದ ರಕ್ಷಣಾ ನಿಯೋಗ ಒಂದು ರಷ್ಯಕ್ಕೆ ತೆರಳಲಿದೆ. ರಷ್ಯದಿಂದ ವಿಶೇಷ ಆಹ್ವಾನ ಬಂದಿತ್ತು. ನಿಯೋಗ ಸೌಹಾರ್ದ ನಿಯೋಗವಾಗಿದೆ. ಭಾರತದ ಮೂರು ಪಡೆ ಅಧಿಕಾರಿಗಳು ನಿಯೋಗದಲ್ಲಿರುವರು.

ಆನೆ ತುಳಿದು ಸಾವು

ಮಂಗಳೂರಿಗೆ ನಲವತ್ತೈದು ಮೈಲಿಗಳ ದೂರದ ಮಂಡಜೆಯಲ್ಲಿ ಇತ್ತೀಚೆಗೆ ಕೆಲಸಕ್ಕೆ ಸೇರಿದ ಚೆರಿಯನ್ ಎಂಬ ಮೂವತ್ತು ವರ್ಷದವನು ಶಿಬಿರದ ಆನೆ ತುಳಿತದಿಂದ ಸತ್ತನು.

ಸಿಡಿಲಿನಿಂದ ಸಾವು

ಪಾಲ್ಘಾಟಿನಿಂದ ಬಂದಿರುವ ವಾರ್ತೆಯ ಪ್ರಕಾರ, ಕೊಟ್ಟಾಪುರಂನಲ್ಲಿ ಒರ್ವ ಹರಿಜನ ಬೇಸಾಯ ಕೆಲಸಗಾರ ಸಿಡಿಲೇಟಿಂದ ಸತ್ತನು.

ಬಂಧನ

ಬೆಂಗಳೂರಿನಲ್ಲಿ ಪೋಲೀಸರು ಅಶ್ಲೀಲ ಪುಸ್ತಕಗಳನ್ನು ವಶವಾಡಿಕೊಂಡ ಸಂದರ್ಭದಲ್ಲಿ ಶ್ರೀ ಬಿ. ಕೆ. ಸುಂದರರಾಜ್‌ರೆಂಬ ಕನ್ನಡ ಲೇಖಕರನ್ನು ಬಂಧಿಸಿದೆ.

ಅಂಚೆ ಕಳ್ಳತನ

ಕಳವರೆ ಅಂಚೆ ಕಚೇರಿಗೆ ಸೇರಿದ ರೂ. ಮುನ್ನೂರು ಮತ್ತು ರಿಜಿಸ್ಟರ್ ಆಗದ ಭಾಂಗಿಗಳನ್ನು ಚೀಲ ಕಳ್ಳತನವಾಗಿರವದಾಗಿ ಚಿಕ್ಕಬಳ್ಳಾಪುರ ವಾರ್ತೆ.

ಅಕ್ಕಿ ಬರುತ್ತೆ

ಮುಂದಿನ ತಿಂಗಳು ಭಾರತಕ್ಕೆ ಥಾಯಿಲ್ಯಾಂಡಿನಿಂದ ಹತ್ತು ಸಾವಿರ ಟನ್ನುಗಳ ಅಕ್ಕಿ ಬರುತ್ತದೆ.

ಆಂಧ್ರಕ್ಕೆ ಫೆರರ್

ಸ್ಪೇನಿನ ಮಿಷನರಿ ಫಾದರ್ ವಿಸ್ಸೆಂಟ್ ಫೆರರ್ ಆಂಧ್ರಕ್ಕೆ ಹೋಗಬಹುದೆಂದು ಭಾರತ ಸರ್ಕಾರದ ಗೃಹ ಶಾಖೆಯು ಸಹಾಯ ಮಂತ್ರಿ ಶ್ರೀ ಶುಕ್ಲಾ ಬೊಂಬಾಯಿನಲ್ಲಿ ತಿಳಿಸಿದ್ದಾರೆ.

ಬಾಪು ಚಿತ್ರಗಳು

ಶಿಕ್ಷಣ ಸಂಸ್ಥೆಗಳು, ಸಾರ್ವಜನಿಕ ಕೇಂದ್ರಗಳು ಮತ್ತು ಸಾರ್ವಜನಿಕ ಲೈಬ್ರರಿಗಳಿಗೆ ಒಂದೂಕಾಲು ಲಕ್ಷ ಗಾಂಧಿ ಚಿತ್ರಗಳನ್ನು ಭಾರತ ಸರ್ಕಾರದ ವಾರ್ತಾ ಶಾಖೆ ಗಾಂಧಿ ಶತಾಬ್ದಿ ಸಂದರ್ಭದಲ್ಲಿ ಸರಬರಾಜು ಮಾಡಲಿದೆ.

ಭಂಗಾರ ವಶ

ಬೆಂಗಳೂರು ಕಬ್ಬನ್‌ಪೇಟೆಯಲ್ಲಿ ಓರ್ವರಿಂದ ರೂ. 22 ಸಾವಿರ ಮೊತ್ತದ ವಿದೇಶಿ ಗುರುತಿನ 110 ತೋಲಾ ಭಂಗಾರವನ್ನು ಸುಂಕದ ಇಲಾಖೆಯವರು ವಶಪಡಿಸಿಕೊಂಡರು.

ಪಾಂಡಿಚೆರಿ ರಾಜ್ಯಪಾಲರಾಗಿ ಶ್ರೀ ಬಿ. ಡಿ. ಜತ್ತಿಯವರ ನೇಮಕವಾಡಿರುವ ಕುರಿತುಟೀಕಿಸಿ, ಮೈಸೂರು ರಾಜ್ಯ. ಡಿ. ಎಂ. ಕೆ. ನಾಯಕ-ಶ್ರೀ ಕೆ. ಜೋಳನ್ ರಾಷ್ಟ್ರಪತಿಯವರಿಗೆ ಮನವಿ ಸಲ್ಲಿಸಿದ್ದಾರೆ.

★ ತುಮಕೂರಿನ 35 ವಯಸ್ಸಿನ ಚಿಕ್ಕಮ್ಮನೆಂಬಾಕೆ ಕೊಲೆ ಆಗಿರುವದಾಗಿ ತಿಪಟೂರು ವಾರ್ತೆ.

○ ಸರ್ಕಾರದೊಡನೆ ಸರ್ವ ವಿಧದ ಅಸಹಕಾರವನ್ನೂ ರಾಷ್ಟ್ರೀಯ ಅಂಚೆ ಮತ್ತು ತಂತಿ ಸಂಘ ವಾಪಸು ಪಡೆದಿದೆ.

ಪ್ರಯಾಣಿಕರಿಗೆ ಬೇಕಾದ ಕಿಟ್ ಬ್ಯಾಗ್, ಹೋಲ್ಡ್ ಆಲ್, ಕ್ವಿಲ್ಟ್, ಏರ್‌ಪಿಲ್ಲೋ, ಸೂಟ್ ಕೇಸ್, ಟ್ರಂಕು ಮುಂತಾದವುಗಳಿಗೆ ಮೈಸೂರಿನ ಬ್ಯಾಂಕ್ ರೋಡ್ ಬಾಹುಸಾರ್ ಜ್ವಾಸಕದಲ್ಲಿಡಿ. ಒಂದೇ ಬೆಲೆ, ನ್ಯಾಯವಾದ ಬೆಲೆ ಮತ್ತು ನಿಮಗೆ ಅನುಕೂಲವಾದ ಬೆಲೆ.

ಒಂದು ಮಹತ್ ವಾಗ್ದಾನ!



ನಿನ್ನ ಮಗನಿಗೆ ಕಾಲೇಜು ವಿದ್ಯಾಭ್ಯಾಸ... ಒಂದು ಎಜ್ಯುಕೇಷನ್ ಎನ್ಯುನಿಟಿ ಪಾಲಿಸಿಯು ಅದನ್ನು ಸಾಧ್ಯಗೊಳಿಸುತ್ತದೆ.

ಉದಾಹರಣೆಗಾಗಿ: ನಿನಗೆ 30 ವರ್ಷ ಪ್ರಾಯವಾದಾಗ ಮತ್ತು ನಿನ್ನ ಮಗ 3 ವರ್ಷದ ಹುಡುಗನಾಗಿರುವಾಗ ಪಡಕೊಂಡ ಈ ಪಾಲಿಸಿಯು ಅವನಿಗೆ 18 ವರ್ಷ ಪ್ರಾಯವಾಗಿ ಅವನು ಕಾಲೇಜಿಗೆ ಹೋಗಲು ಸಿದ್ಧನಾಗುವಾಗ, ವರ್ಷಕ್ಕೆ ಎರಡುಬಾರಿ ರೂ. 500 ರಂತೆ 5 ವರ್ಷಗಳವರೆಗೆ ಹಣವನ್ನು ಒದಗಿಸುವುದು. ಇದಕ್ಕಾಗಿ ನೀವು ಪ್ರತಿತಿಂಗಳೂ ಕೊಡಬೇಕಾಗುವ ಹಣ ಕೇವಲ ರೂ. 23.88!

ನಿಜ, ನೀವು ಬೇರೆ ವಿಧಗಳಲ್ಲಿಯೂ ಹಣವನ್ನು ಉಳಿಸಬಹುದು. ಆದರೆ ಜೀವವಿಮೆಯಿಂದ ಆ ಹಣ ನಿಶ್ಚಯವಾಗಿ — ಒಂದು ವೇಳೆ ನೀವು ಇರದಿದ್ದರೂ ಕೂಡ — ಸಿಗುವುದೆಂದು ನಿನಗೆ ಗೊತ್ತಿರುತ್ತದೆ. ಇದೊಂದು ಜೀವವಿಮೆಯಿಂದಾಗಿ ದೊರಕುವ ಅಪೂರ್ವ ಸೌಲಭ್ಯ.

ನಿನ್ನ ಎಲ್.ಐ.ಸಿ. ನಿಜಂಟೆಷನ್ನು ಇಂದೇ ಕಾಣಿರಿ. ಅವನು ಬಹಳ ಸ್ನೇಹಭಾವದವನಾಗಿರುತ್ತಾನೆ. ನಿನಗೆ ಸಹಾಯ ನೀಡಲು ತರಬೇತಿಯನ್ನೂ ಪಡೆದಿದ್ದಾನೆ.

ಜೀವ ವಿಮೆಗಿಂತ ಶ್ರೇಷ್ಠ ಉಳಿತಾಯ

ಬೇರೊಂದಿಲ್ಲ

ನ್ಯೂಯಾರ್ಕ್ ಟೈಂಸ್ ಸುದ್ದಿಗಾರರೆಮಾಂಡ್‌ರನ್ನು ದೇಶದಿಂದ ಹೋಗುವಂತೆ ರಷ್ಯ ಆಜ್ಞೆ ಮಾಡಿದೆ

ಹಿಂದೂಗಳ ಆಚಾರ

ಗ್ರಾಹಕರು – ಶಾಸ್ತ್ರಧರ್ಮನಿರತ " ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

ಒಂದೇ ಬ್ರಹ್ಮಸೂತ್ರಕ್ಕೆ ಎಲ್ಲಾ ಮತಾಚಾರ್ಯರೂ ಭಾಷ್ಯಗಳನ್ನು ರಚಿಸಿದ್ದಾರೆ. ಬ್ರಹ್ಮಸಮಾಜದವರು ಉಪಾಸನೆ ಮಾಡುತ್ತೇವೆಂದು ಹೇಳುವುದು ಉಪನಿಷತ್ತಿನಲ್ಲಿರುವ ನಿರಾಕಾರ ಪರಬ್ರಹ್ಮನನ್ನೇ ; ಆರ್ಯಸಮಾಜದವರು ಹೋಮ ಮಾಡುವುದು ವೇದಮಂತ್ರಗಳನ್ನು ಹೇಳುತ್ತಲೇ. ಜೈನರು ಯಜ್ಞಯಾಗಾದಿಗಳನ್ನು ಖಂಡಿಸಿದರೂ, ಉಪನಿಷತ್ತಿನಲ್ಲಿ ಹೇಳಿರುವ ಪರಬ್ರಹ್ಮ ಸ್ವರೂಪವನ್ನೇ ಖಂಡಿಸಿಲ್ಲ. ಇದೇ ರೀತಿ ಬೌದ್ಧಮತದ ತತ್ವಗಳ ಜ್ಞಾನವಿಲ್ಲದೇ ಈಸಾಯಿ ಮತವೂ, ಅದರ ಸಹವಾಸಬಲದಿಂದಲೇ ಇಸ್ಲಾಂ ಮತವೂ ಹುಟ್ಟಿವೆ. ಇದರಿಂದ ನಾವು ತಿಳಿಯಬಹುದಾದುದೇನೆಂದರೆ, ಲೋಕಕ್ಕೆ ಧರ್ಮಗ್ರಂಥವೆಂದರೆ " ವೇದ ". ಸೂರ್ಯನ ತೇಜಸ್ಸನ್ನು ಪಡೆದೇ ಇತರ ಎಲ್ಲಾ ಗ್ರಹಗಳೂ ಪ್ರಕಾಶಿಸುವಂತೆ, ವೇದದಿಂದಲೇ ಎಲ್ಲಾ ಮತಗಳೂ ಉದಯವಾಗಿವೆ. ಆದುದರಿಂದ ಹಿಂದುಗಳಿಗೆಲ್ಲಾ ಧರ್ಮಗ್ರಂಥ ವೆಂದೇ.

○

ಅರಮನೆಗೆ ಆಮಂತ್ರಣೆಗಳು

ಶ್ರೀಮನ್ಮಹಾರಾಜರು ಶೃಂಗೇರಿಗೆ ಹೋಗುವ ಮಾರ್ಗದಲ್ಲಿ, ಸಕ್ರೆಬೈಲು ಅರಣ್ಯದಲ್ಲಿನ, ನಂಜುಂಡ, ಭೀಮ, ಭಾಸ್ಕರ ಎಂಬ ಆನೆಗಳನ್ನು ಅಕ್ಕಮ್ಮನೆಗ್ಗಾಗಿ ಚುನಾಯಿಸಿದ್ದಾರೆಂದು ಗೊತ್ತಾಗಿದೆ.

★

ಶ್ರೀಮನ್ಮಹಾರಾಜರು ಶೃಂಗೇರಿಯಲ್ಲಿ

ತಮ್ಮ ಮಾತೃಶ್ರೀಯವರೊಡನೆ ಶೃಂಗೇರಿಗೆ ದಯಮಾಡಿಸಿದ್ದ ಶ್ರೀಮನ್ಮಹಾರಾಜರವರು ಶ್ರೀ ಶಾರದಾದೇವಿಯ ಕೋಟಿನಾಮಾರ್ಚನೆಯನ್ನು ವೀಕ್ಷಿಸಿ, ಶ್ರೀ ಜಗದ್ಗುರುಗಳವರ ದರ್ಶನ ಆಶೀರ್ವಾದ ಪಡೆದರೆಂದು ತಿಳಿಯಬಂದಿದೆ.

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4

ವುಡ್‌ಲ್ಯಾಂಡ್ಸ್ ಜನಪ್ರಿಯ 6 ನೇ ವಾರ
ವೈಭವ ಆರಂಭ

ಮನಮೋಹಕ ಹಿಂದಿ ಚಿತ್ರ — — ಈಸ್ಟ್‌ಮನ್ ಕಲರ್

ನೀಲ್ ಕಮಲ್ ★ Neel Kamal

.... ಮಿಲಿಯಗಟ್ಟಲೆ ಖರ್ಚಿನಲ್ಲಿ ತಯಾರಿಸಿರುವ ಅತ್ಯಾಕರ್ಷಣೀಯ ಹಿಂದಿ ಚಿತ್ರ ....

ತಾರಾಗಣ— ವಹಿದಾ ರೆಹಮಾನ್, ಮನೋಜ್ ಕುಮಾರ್, ರಾಜ್ ಕುಮಾರ್
ಬಾಲ್‌ರಾಜ್ ಸಹಾನಿ, ಲಲಿತಾ ಪವಾರ್, ಡೇವಿಡ್, ಕೆಶಿಕಲಾ, ಮಹಮೂದ್

ಆಪೆರ— ಜನಪ್ರೀತ 2 ನೇ ವಾರ

ಮನಮೋಹಕ ತಮಿಳು ಚಿತ್ರ — — ದಿನವಹಿ 3 ಆಟಗಳು

ನೇರ್‌ವಳಿ

ನಟವರ್ಗ— ಜಯಶಂಕರ್, ಆನಂದ್, ಮನೋಹರ್, ನಾಗೇಶ್, ಸುಂದರರಾಜ್
ವಾಣಿಶ್ರೀ, ಚಂದ್ರಿಕಾ, ಮನೋರಮ, ವಿಜಯಲಲಿತ

Printing — Neat Binding

Lakshminarasimha Press

Sivarampet, Mysore

SHAKTI

SUDHA

A Superb Tonic

Protect the Cow

ಗೋರಕ್ಷಣೆ ಪ್ರಾಣಿದಯಾ ಕಾರ್ಯಗಳು ಹೆಚ್ಚಿಗಿ ನಡೆಯಲಿ